# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
# Karnataka State Financial Corporation

ಸಂಸ್ಥೆಯ ಅಧ್ಯಕ್ಷರಾದ

**ಶ್ರೀ ಐ.ಎಸ್.ಎನ್. ಪ್ರಸಾದ್,** ಭಾ.ಆ.ಸೇ.

ಇವರು ದಿನಾಂಕ : 27ನೇ ಜುಲೈ 2021 ರಂದು
ಸಂಸ್ಥೆಯ 62ನೇ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಭಾಷಣ




**ಉದ್ಯಮಶೀಲತೆ ಅಭಿವೃದ್ಧಿಗೆ 62 ವರ್ಷಗಳ ಸುದೀರ್ಘ ಸೇವೆ**

**62 years long service for entrepreneurship development**



ಶ್ರೀ ಐ ಎಸ್ ಎನ್ ಪ್ರಸಾದ್, ಭಾ.ಆ.ಸೇ.
ಅಧ್ಯಕ್ಷರು

**Sri I S N PRASAD,** IAS
Chairman

## ಶ್ರೀ ಐ ಎಸ್ ಎನ್ ಪ್ರಸಾದ್, ಭಾ.ಆ.ಸೇ.
## ಅಧ್ಯಕ್ಷರು
## ದಿನಾಂಕ 27ನೇ ಜುಲೈ 2021 ರಂದು ಸಂಸ್ಥೆಯ 62ನೇ ವಾರ್ಷಿಕ ಮಹಾಸಭೆಯಲ್ಲಿ ಮಾಡಿದ ಭಾಷಣ

**ಆತ್ಮೀಯ ಷೇರುದಾರರೇ,**

ಸಂಸ್ಥೆಯ 62ನೇ ವಾರ್ಷಿಕ ಮಹಾಸಭೆಗೆ ತಮಗೆಲ್ಲ ಸ್ವಾಗತ ಬಯಸಲು ಹರ್ಷವಾಗುತ್ತಿದೆ. 31ನೇ ಮಾರ್ಚ್' 2021ಕ್ಕೆ ಅಂತ್ಯಗೊಂಡ ಸಂಸ್ಥೆಯ ಕಾರ್ಯಾಚರಣೆಯ 62ನೇ ವಾರ್ಷಿಕ ವರದಿ ಹಾಗೂ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಮಂಡಿಸಲು ನನಗೆ ಹರ್ಷವಾಗುತ್ತದೆ.

ಪ್ರಸಕ್ತ 2020–21ರ ಸಾಲಿನ ಆರ್ಥಿಕ ಸ್ಥಿತಿಯನ್ನು ಕ್ರೋಢೀಕರಿಸಲಾಗಿದ್ದು, ಸಂಸ್ಥೆಯು 42.90 ಕೋಟಿ ರೂ.ಗಳ ಲಾಭವನ್ನು ದಾಖಲಿಸಿದೆ. ಸಂಸ್ಥೆಯ ನಿರ್ದೇಶಕರ ಮಂಡಳಿಯ 62ನೇ ವಾರ್ಷಿಕ ವರದಿ ಮತ್ತು 31ನೇ ಮಾರ್ಚ್' 2021ಕ್ಕೆ ಅಂತ್ಯಗೊಂಡ ಲೆಕ್ಕಪತ್ರದ ವಿವರಗಳನ್ನು ತಮಗೆಲ್ಲರಿಗೂ ಈಗಾಗಲೇ ತಲುಪಿಸಲಾಗಿದ್ದು, ತಾವೆಲ್ಲರೂ ಅದನ್ನು ಪರಾಮರ್ಶಿಸಿದ್ದೀರೆಂದು ಭಾವಿಸಿದ್ದೇನೆ. ಆದಾಗ್ಯೂ 2020–21ರಲ್ಲಿ ಸಂಸ್ಥೆಯ ಪ್ರಗತಿಯ ಪ್ರಮುಖ ಅಂಶಗಳನ್ನು ಪರಿಶೀಲಿಸುವ ಮುನ್ನ ಜಾಗತಿಕ, ರಾಷ್ಟ್ರ ಹಾಗೂ ರಾಜ್ಯದ ಆರ್ಥಿಕತೆಯ ಪಕ್ಷಿನೋಟವನ್ನು ಪರಾಮರ್ಶಿಸಬಹುದು.

**ಜಾಗತಿಕ ಆರ್ಥಿಕ ನೋಟ :**

ವಿಶ್ವ ಆರ್ಥಿಕ (ಮಿತವ್ಯಯ)ತೆ 2021ರಲ್ಲಿ ಶೇ.5.6ರಷ್ಟು ಪ್ರಮಾಣದಲ್ಲಿ ವಿಸ್ತರಣೆಯಾಗಲಿದೆ. ಕಳೆದ 80 ವರ್ಷಗಳಲ್ಲಿ ಆರ್ಥಿಕ ಹಿಂಜರಿತದ ಅವಧಿಯ ನಂತರ ಇದು ಅತ್ಯಂತ ತೀವ್ರಗತಿಯಲ್ಲಿದೆ. ಇದಕ್ಕೆ ಭಾಗಶಃ ಸ್ಥಿರ ಆದರೆ ಲಸಿಕೆ ದೊರೆಯುವಿಕೆಯಲ್ಲಿನ ಅತಿಯಾದ ಏರಳಿತಗಳೇ ಕಾರಣ ಎಂದು ಗುರುತಿಸಲಾಗಿದೆ. ಜಾಗತಿಕ ಆರ್ಥಿಕ ಪುನಃಶ್ಚೇತನವು ಬಹಳಷ್ಟು ಅಸಮಾನತೆಯಿಂದ ಕೂಡಿದೆ. ಬಹುತೇಕ ಉದಯೋನ್ಮುಖ ಮಾರುಕಟ್ಟೆ ಮತ್ತು ಅಭಿವೃದ್ಧಿಶೀಲ ಆರ್ಥಿಕ ವಹಿವಾಟುಗಳು ಹಿಂಜರಿತದೊಂದಿಗೆ ಆರ್ಥಿಕ ಬೆಳವಣಿಗೆಯು ಕೆಲವೇ ಪ್ರಮುಖ ಹಣಕಾಸು ವಹಿವಾಟುಗಳಲ್ಲಿ ಕೇಂದ್ರೀಕೃತಗೊಂಡಿದೆ.

ಜಾಗತಿಕ ವೃದ್ಧಿಯ ಪ್ರಮಾಣವು ಶೇ.4.3ರಷ್ಟು ಸಾಧಾರಣ ದರದೊಂದಿಗೆ ಆರ್ಥಿಕ ಪುನಶ್ಚೇತನವು 2022ರಲ್ಲಿ ಮುಂದುವರೆಯುವುದೆಂದು ನಿರೀಕ್ಷಿಸಿದೆ. ಸರಿ ಸುಮಾರು

ಶೇ.90ರಷ್ಟು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ಸ್ಥಿತಿಯು ಕೋವಿಡ್–19 ಸಾಂಕ್ರಾಮಿಕ ಪೂರ್ವದಲ್ಲಿದ್ದ ಪ್ರತಿ ವ್ಯಕಿಯ್ತ ಆದಾಯದ (per capita Income) ಮಟ್ಟವನ್ನು 2022ರಲ್ಲಿ ಪುನ: ತಲುಪಬಹುದಾಗಿ ನಿರೀಕ್ಷಿಸಲಾಗಿದೆ. ಹಾಗೆಯೇ ಭಾಗಶ: ಉದಯೋನ್ಮುಖ ಮಾರುಕಟ್ಟೆ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆರ್ಥಿಕ ಸ್ಥಿತಿಯು ಸಹ ಈ ಸಾಧನೆ ಮಾಡಬಹುದೆಂಬ ಆಶಯ ಹೊಂದಲಾಗಿದೆ. ತತ್ಪರಿಣಾಮವಾಗಿ ಮುಂದುವರಿದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ಸ್ಥಿತಿಯಲ್ಲಿ ಪ್ರತಿ ವ್ಯಕ್ತಿ ಆದಾಯ (per capita Income) ಮಟ್ಟ ತಲುಪುವಿಕೆಯು ನಿಧಾನಗತಿಯಾದರೆ, ಬಹಳಷ್ಟು ಬಡರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯು ಹಿಮ್ಮುಖವಾಗುವ ಸಾಧ್ಯತೆಗಳಿರುವವು.

**ಭಾರತೀಯ ಆರ್ಥಿಕ ನೋಟ:**

2020ನೇ ವರ್ಷವು ಸಂಪೂರ್ಣವಾಗಿ ಕೋವಿಡ್–19ರ ಸಾಂಕ್ರಾಮಿಕ ಸೋಂಕಿಗೀಡಾಗಿದ್ದು ವಿಶ್ವ ಆರ್ಥಿಕ ಬಿಕ್ಕಟಿನ ಅವಧಿಯಿಂದ ಭಾರತ ಮತ್ತು ಜಗತ್ತಿಗೆ ಅತ್ಯಂತ ದುಸ್ತರವಾದ ಆರ್ಥಿಕ ಸವಾಲುಗಳನ್ನು ತಂದೊಡ್ಡಿದೆ.

ಒಟ್ಟು ಸ್ಥಳೀಯ ಉತ್ಪನ್ನ (ಜಿಡಿಪಿ)ದ ಬೆಳವಣಿಗೆಯು 2019–20ನೇ ಸಾಲಿನಲ್ಲಿದ್ದ ಶೇ.4.0ರ ಪ್ರಮಾಣಕ್ಕೆ ಹೋಲಿಸಿದಲ್ಲಿ 2020–21ನೇ ಸಾಲಿನಲ್ಲಿ ಋಣಾತ್ಮಕ (–)8.0 ಪ್ರಮಾಣದಲ್ಲಿರುವುದೆಂದು ಅಂದಾಜಿಸಲಾಗಿದೆ. ಮುಂಗಾರು ಸುಗ್ಗಿ ಮತ್ತು ಹಿಂಗಾರು ಬಿತ್ತುವಿಕೆಯಂತಹ ಕೃಷಿ ಚಟುವಟಿಕೆಗಳು ಕೋವಿಡ್–19ರ ಸೋಂಕಿನಿಂದಾಗಿ ಜಾರಿಗೊಳಿಸಲಾಗಿದ್ದ ಲಾಕ್‌ಡೌನ್‌ನಿಂದ ಬಹುಮಟ್ಟಿಗೆ ಬಾಧಿತಗೊಂಡಿಲ್ಲ. ಕೈಗಾರಿಕೋದ್ಯಮ ಮತ್ತು ಸೇವಾವಲಯಗಳು ಈ ವರ್ಷ ಕ್ರಮವಾಗಿ ಶೇ.9.6 ಮತ್ತು ಶೇ. 8.8ರಷ್ಟು ಪ್ರಮಾಣದಲ್ಲಿ ಕುಸಿತವನ್ನು ಕಾಣುವುದೆಂಬ ಲೆಕ್ಕಚಾರವಿದೆ. ಕೈಗಾರಿಕಾ ವಲಯ ವ್ಯಾಪ್ತಿಯಲ್ಲೇ ಗಣಿಗಾರಿಕೆಯು ಶೇ.12.4ರಷ್ಟು, ಉತ್ಪಾದಕಾ ವಲಯವು ಶೇ.9.4 ಮತ್ತು ನಿರ್ಮಾಣ ವಲಯವು ಶೇ.12.6ರಷ್ಟು ಕುಸಿತಕ್ಕೀಡಾಗುವ ಸಾಧ್ಯತೆಗಳಿರುವವು. ಬಳಕೆದಾರ (ಉಪಯುಕ್ತತಾ) ವಲಯವು ಚುರುಕಿನ ಪುನಶ್ಚೇತನ ಕಂಡಿದ್ದು 2020–21ನೇ ಸಾಲಿನಲ್ಲಿ ಶೇ.2.7ರಷ್ಟು ಧನಾತ್ಮಕ ಬೆಳವಣಿಗೆಯನ್ನ ದಾಖಲಿಸಲಾಗಿದೆ. ಸೇವಾ ವಲಯ ವ್ಯಾಪ್ತಿಯಲ್ಲಿ ವಾಣಿಜ್ಯ, ಹೋಟೆಲ್‌ಗಳು, ಸಾರಿಗೆ ಮತ್ತು ಸಂಪರ್ಕ ವಿಭಾಗಗಳು ಶೇ.21.4ರಷ್ಟು ಪ್ರಮಾಣದ ಕುಸಿತಕ್ಕೀಡಾಗುವುದೆಂದು ಅಂದಾಜಿಸಿದೆ.

**ಕರ್ನಾಟಕ ಆರ್ಥಿಕ ನೋಟ:**

ಕೋವಿಡ್–19 ಸಾಂಕ್ರಾಮಿಕ ರೋಗವು ಆಘಾತದ ರೀತಿಯಲ್ಲಿ ಜನಸಾಮಾನ್ಯರಿಗೆ ಆರ್ಥಿಕ ಮತ್ತು ಆರೋಗ್ಯ ಬಿಕ್ಕಟ್ಟನ್ನು ಉಂಟುಮಾಡಿರುತ್ತದೆ. ವೈರಸ್ ನಿಗ್ರಹಿಸಲು ಕೈಗೊಂಡ ಆಗತ್ಯವಾದ ಕ್ರಮಗಳು ಆರ್ಥಿಕ ಕುಸಿತವನ್ನು ಉಂಟು ಮಾಡಿರುತ್ತದೆ.

ಲಾಕ್‌ಡೌನ್ ಅವಧಿಯಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮತ್ತು ರಾಜ್ಯಗಳಲ್ಲಿ ಉತ್ಪಾದನೆ, ಬಳಕೆ, ವಿನಿಮಯ ಮತ್ತು ಇತರ ಪರಸ್ಪರ ಅವಲಂಬಿತ ಆರ್ಥಿಕ ಚಟುವಟಿಕೆಗಳು ಉದ್ಯಮಗಳನ್ನು ಕುಂಠಿತಗೊಳಿಸಿದ್ದರಿಂದ ತೀವ್ರತರವಾಗಿ ಪರಿಣಾಮಗಳನ್ನು ಅನುಭವಿಸಲಾಗಿರುತ್ತದೆ. ಉದ್ಯೋಗ ಮತ್ತು ಆದಾಯ ನಷ್ಟಗಳು, ಅನೌಪಚಾರಿಕ (ಅಸಂಘಟಿತ ವಲಯವೂ ಸೇರಿದಂತೆ) ಕ್ಷೇತ್ರಗಳಲ್ಲಿನ ಕಾರ್ಮಿಕರ ಮೇಲೆ ಮತ್ತು ಶಾಸನಬದ್ಧ ಸಾಮಾಜಿಕ ಭದ್ರತಾ ಕ್ರಮಗಳಿಂದ ವಂಚಿತರಾದ ಅಸುರಕ್ಷಿತ ಬಡ ಕುಟುಂಬಗಳ ಮೇಲೆ ತೀವ್ರತರವಾಗಿ ಪರಿಣಾಮವನ್ನು ಬೀರಿರುತ್ತದೆ. ವಿಶೇಷವಾಗಿ ವಲಸಿಗರು ಅಥವಾ ಮನೆಯಿಲ್ಲದವರಿಗೆ ಮತ್ತು ಅವರ ಅವಲಂಬಿತರಿಗೆ ಜೀವನೋಪಾಯವು ನಿರ್ಣಾಯಕ ವಿಷಯವಾಗಿರುತ್ತದೆ. ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿಯಲ್ಲೂ ಕರ್ನಾಟಕ ರಾಜ್ಯದ ಸಾಧನೆಗಳು ಗಮನಾರ್ಹವಾಗಿರುತ್ತದೆ.

2020–21 ನೇ ಸಾಲಿನ ಮುನ್ಸೂಚನಾ ಅಂದಾಜುಗಳಂತೆ ಕೋವಿಡ್–19 ಮಹಾಮಾರಿ ನಿಯಂತ್ರಿಸಲು ವಿಧಿಸಲಾಗಿದ್ದ ಲಾಕ್‌ಡೌನ್ ಕ್ರಮಗಳಿಂದಾಗಿ, ರಾಜ್ಯದ ಒಟ್ಟು ಅಂತರಿಕ ಉತ್ಪನ್ನವು ಸ್ಥಿರ (2011–12) ಬೆಲೆಗಳಲ್ಲಿ ಶೇ.(–)2.6 ಬೆಳವಣಿಗೆಯೊಂದಿಗೆ 11,13,818 ಕೋಟಿ ರೂಪಾಯಿಗಳಾಗುವ ನಿರೀಕ್ಷೆಯಿದೆ.

ಭಾರತದ ನಾವೀನ್ಯತೆ ಸೂಚ್ಯಂಕದಲ್ಲಿ ಮತ್ತು ನವೀಕರಿಸಬಹುದಾದ ಇಂಧನದಲ್ಲಿ ರಾಜ್ಯವು ಪ್ರಥಮ ಸ್ಥಾನದಲ್ಲಿದೆ ಹಾಗೂ ರಾಜ್ಯವು ಹಾಲು ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿದೆ. ರಾಜ್ಯವು ದೇಶದ ಅಂತರಿಕ ಉತ್ಪನಕ್ಕೆ ಶೇ.8 ರಷ್ಟು ಮತ್ತು ದೇಶದ ಮಾಹಿತಿ ತಂತ್ರಜ್ಞಾನ ರಫ್ತಿಗೆ ಶೇ.40 ರಷ್ಟು ಕೊಡುಗೆಯನ್ನು ರಾಜ್ಯವು ನೀಡಿರುತ್ತದೆ.

ಪ್ರಸಕ್ತ ಬೆಲೆಗಳಲ್ಲಿ 2019–20ನೇ ಸಾಲಿನಲ್ಲಿ ರಾಜ್ಯದ ನಿವ್ವಳ ತಲಾ ಆದಾಯವು 2,23,175 ರೂಪಾಯಿಗಳಿಷ್ಟಿದ್ದು. ಇದು 2020–21ನೇ ಸಾಲಿಗೆ ಶೇ.1.6ರಷ್ಟು ಹೆಚ್ಚಳದೊಂದಿಗೆ 2,26,796 ರೂಪಾಯಿಗಳಷ್ಟಾಗುವುದೆಂದು ಅಂದಾಜಿಸಲಾಗಿದೆ.

2019–20 ನೇ ಸಾಲಿನ ರಾಜ್ಯದ ಒಟ್ಟು ಅಂತರಿಕ ಉತ್ಪನ್ನದಲ್ಲಿ ಕೃಷಿ ವಲಯದ ಕೊಡುಗೆ ಶೇ.12.16 ರಷ್ಟಿದ್ದು, 2020–21ನೇ ಸಾಲಿಗೆ ಶೇ.13.15ಕ್ಕೆ ಏರಿಕೆಯಾಗಿರುತ್ತದೆ. 2019–20ನೇ ಸಾಲಿನಲ್ಲಿ ಕೈಗಾರಿಕಾ ವಲಯದ ಕೊಡುಗೆ ಶೇ.21.68 ರಷ್ಟಿದ್ದು 2020–21ನೇ ಸಾಲಿನಲ್ಲಿ ಶೇ.20.31ಕ್ಕೆ ಇಳಿಕೆಯಾಗಿರುತ್ತದೆ. ಒಟ್ಟು ಅಂತರಿಕ ಉತ್ಪನ್ನದಲ್ಲಿ ಸೇವಾ ವಲಯದ ಕೊಡುಗೆ ಅಧಿಕವಾಗಿದ್ದು, 2019–20ನೇ ಸಾಲಿನಲ್ಲಿ ಶೇ.66.16ರಷ್ಟಿದ್ದು. 2020–21ನೇ ಸಾಲಿನಲ್ಲಿ ಶೇ.66.53ಕ್ಕೆ ಏರಿಕೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. 2020–21ನೇ ವರ್ಷದಲ್ಲಿ ಸ್ಥಿರಾಸ್ತಿ, ವೃತ್ತಿಪರ ಸೇವೆಗಳು ಮತ್ತು ವಾಸ ಗೃಹಗಳ ಒಡೆತನ ವಲಯದ ಕೊಡುಗೆಯು ರಾಜ್ಯದ ಒಟ್ಟು ಅಂತರಿಕ ಉತ್ಪನ್ನದಲ್ಲಿ ಅತಿ ಹೆಚ್ಚು ಅಂದರೆ ಶೇ.33.46 ರಷ್ಟಿರುತ್ತದೆ. ನಂತರದ ಸ್ಥಾನಗಳಲ್ಲಿ ತಯಾರಿಕಾ ವಲಯ

(ಶೇ.13.11). ವ್ಯಾಪಾರ ಮತ್ತು ದುರಸ್ತಿ ಸೇವೆಗಳು (ಶೇ.10.38) ಹಾಗೂ ಬೆಳೆಗಳು (ಶೇ.8.57) ವಲಯಗಳು ಇರುತ್ತವೆ.

ಹಣಕಾಸು ವರ್ಷ 2020–21 (ಫೆಬ್ರವರಿ 2021 ಅಂತ್ಯದವರೆಗೆ) ರಾಜ್ಯದ ಒಟ್ಟು ರಫ್ತು ಮೌಲ್ಯವು US$ 84,807.05 ಮಿಲಿಯನ್‌ಗಳಾಗಿರುತ್ತದೆ. ರಾಜ್ಯದ ಎಲೆಕ್ಟ್ರಾನಿಕ್ ಮತ್ತು ಸಾಫ್ಟ್‌ವೇರ್ ರಫ್ತು ಮೌಲ್ಯವು ಶೇ.84 (US$ 71,629.03 ಮಿಲಿಯನ್‌ಗಳಾಗಿರುತ್ತದೆ) ಹಾಗೂ ಮರ್ಚಂಡೈಸ್ ರಫ್ತು ಮೌಲ್ಯವು ಶೇ.16. (US$ 13,178.02 ಮಿಲಿಯನ್) ದೇಶದ ಒಟ್ಟು ರಫ್ತುವಿನಲ್ಲಿ ರಾಜ್ಯವು ಶೇ.19 ರಷ್ಟು ಪಾಲು ಹೊಂದಿದೆ.

ರಾಜ್ಯದ ಏಕಗವಾಕ್ಷಿ ಯೋಜನಾ ಮಂಜೂರಾತಿ ಸಮಿತಿಯ ಮೂಲಕ ರಾಜ್ಯವು ಕೈಗಾರಿಕಾ ಬಂಡವಾಳವನ್ನು ಆಕರ್ಷಿಸುತ್ತಿದೆ. ಪ್ರಸ್ತುತ ವರ್ಷ ಸಮಿತಿಯ 307 ಯೋಜನೆಗಳಿಂದ 15,270.66 ಕೋಟಿ ರೂ.ಗಳ ಮೊತ್ತದ ಉದ್ದೇಶಿತ ಬಂಡವಾಳ ಹೂಡಿಕೆಗೆ ಒಪ್ಪಿಗೆ ನೀಡಿದ್ದು, ಈ ಕೈಗಾರಿಕಾ ಯೋಜನೆಗಳಿಂದ ಸುಮಾರು 85,694 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ. ರಾಜ್ಯದ ಉನ್ನತ ಮಟ್ಟದ ಯೋಜನಾ ಮಂಜೂರಾತಿ ಸಮಿತಿಯು 09 ಬೃಹತ್ ಕೈಗಾರಿಕಾ ಯೋಜನೆಗಳಿಂದ 37,464.10 ಕೋಟಿ ರೂ.ಗಳ ಉದ್ದೇಶಿತ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದ್ದು, ಈ 09 ಬೃಹತ್ ಯೋಜನೆಗಳಿಂದ ಸುಮಾರು 25,909 ಉದ್ಯೋಗವಕಾಶ ರಾಜ್ಯದಲ್ಲಿ ಸೃಷ್ಟಿಯಾಗಲಿದೆ.

ಪ್ರಸಕ್ತ ವರ್ಷದಲ್ಲಿ ರಾಜ್ಯವು US$ 3,660 ಮಿಲಿಯನ್ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದರ ಮೂಲಕ ದೇಶದ ಒಟ್ಟು ವಿದೇಶಿ ನೇರಬಂಡವಾಳ US$ 30,004 ಮಿಲಿಯನ್‌ನಲ್ಲಿ ಶೇ.12 ರಷ್ಟು ಆಗಿರುತ್ತದೆ.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು ರಾಜ್ಯದ ಕೈಗಾರಿಕಾ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸಲಾಗಿದೆ. 2020–21ನೇ ಹಣಕಾಸು ವರ್ಷದಲ್ಲಿ (ಜೂನ್ ಅಂತ್ಯದವರೆಗೆ) 82,227 ಘಟಕಗಳು ರಾಜ್ಯದಲ್ಲಿ ನೋಂದಾಯಿಸಿಕೊಂಡಿದ್ದು, ಈ ಘಟಕಗಳಿಂದ 18,08,442 ಲಕ್ಷ ರೂ.ಗಳ ಬಂಡವಾಳ ಹೂಡಿಕೆಯಾಗುವ ಸಾಧ್ಯತೆ ಇದ್ದು, 5,42,890 ಉದ್ಯೋಗಾವಕಾಶ ಸೃಷ್ಟಿಯಾಗಲಿದೆ.

**ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ರಾಜ್ಯ ಸರ್ಕಾರದ ಬೆಂಬಲ :**

ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಗೆ 100.00 ಕೋಟಿ ರೂ.ಗಳ ಈಕ್ವಿಟಿ ಬಂಡವಾಳವನ್ನು ಹಾಗೂ 172.25 ಕೋಟಿ ರೂ.ಗಳ ಬಡ್ಡಿ

ಸಹಾಯಧನದ ನೆರವನ್ನು ಹಲವು ಯೋಜನೆಗಳಡಿಯಲ್ಲಿ ಒದಗಿಸಿದ್ದು, ಅವುಗಳ ವಿವರ ಈ ಕೆಳಗಿನಂತಿವೆ.

| | |
|---|---|
| ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ | 42.50 ಕೋಟಿ ರೂ.ಗಳು |
| ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ | 12.00 ಕೋಟಿ ರೂ.ಗಳು |
| ಮಹಿಳಾ ಉದ್ದಿಮೆದಾರರಿಗೆ | 67.75 ಕೋಟಿ ರೂ.ಗಳು |
| ಮೊದಲ ಪೀಳಿಗೆ ಉದ್ದಿಮೆದಾರರಿಗೆ | 3.00 ಕೋಟಿ ರೂ.ಗಳು |
| ಇತರೇ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ | 47.00 ಕೋಟಿ ರೂ.ಗಳು |
| **ಒಟ್ಟು** | **172.25 ಕೋಟಿ ರೂ.ಗಳು** |

**ಸಹಾಯಧನ ಮತ್ತು ಅನುದಾನಗಳು:**

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ಯಮಿಗಳು ಸ್ಥಾಪಿಸುವ ಜವಳಿ ಮತ್ತು ಕೈಮಗ್ಗ ಘಟಕಗಳಿಗೆ ವಿಶೇಷ ಹಣಕಾಸಿನ ಅನುದಾನ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರವು 20.56 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ.

**ಪ್ರಮುಖ ನೀತಿ ನಿರ್ಧಾರಗಳು:**

- ಸಂಸ್ಥೆಯ ಸಾಲ ನೀತಿಗೆ ಕೆಲವು ಮಾರ್ಪಾಡುಗಳನ್ನು ಮಾಡಲಾಯಿತು.
- ನಷ್ಟದ ಸ್ವತ್ತುಗಳನ್ನು ಗುರುತಿಸಿ ವಿವೇಕಯುತವಾಗಿ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ ತೀರ್ಮಾನ.
- ಕೋವಿಡ್–19 ನಿಯಂತ್ರಕ ಪ್ಯಾಕೇಜ್
- ಸಾಲದ ಮೇಲಿನ ಬಡ್ಡಿಯನ್ನು ಒಡಂಬಡಿಕೆ ಪೂರ್ವ ಡಿ–3 ಮತ್ತು ಎಂ.ಆರ್. ಪ್ರಕರಣಗಳಿಗೆ ಸಂಬಂಧಿಸಿದಂತೆ ಸ್ಥಗಿತಗೊಳಿಸುವ ಬಗ್ಗೆ ತೀರ್ಮಾನ.
- ಸಂಸ್ಥೆಯ ಮಾಹಿತಿ ತಂತ್ರಜ್ಞಾನವನ್ನು ಉನ್ನತಿಕರಿಸುವ ಬಗ್ಗೆ ತೀರ್ಮಾನ.
- ನೂತನ ಹಾಗೂ ಈಗಾಗಲೇ ಅಸ್ಥಿತ್ವದಲ್ಲಿರುವ ಸೂಕ್ಷ್ಮ ಮತ್ತು ಸಣ್ಣ, ಉತ್ಪಾದನಾ ಹಾಗೂ ಇತರೆ ಸೇವಾ ಘಟಕಗಳಿಗೆ ಪರಿಷ್ಕೃತ ಬಡ್ಡಿ ಸಹಾಯಧನ ಯೋಜನೆ ಜಾರಿ.
- ಕೇಡರ್ ಮತ್ತು ನೇಮಕಾತಿ ನಿಯಮಗಳು ಹಾಗೂ ಮಾನವಶಕ್ತಿ ಸಂಪನ್ಮೂಲ ನಿಯಮಗಳಿಗೆ ತಿದ್ದುಪಡಿ.

**ಕಾರ್ಯಾಚರಣೆಯ ಮುಖ್ಯಾಂಶಗಳು :**

**ಮಂಜೂರಾತಿಗಳು:**

2020–21ರ ಆರ್ಥಿಕ ವರ್ಷದಲ್ಲಿ ವಿವಿಧ ಸಾಲ ಯೋಜನೆಗಳ ಮೂಲಕ 445 ಪ್ರಕರಣಗಳಿಗೆ 401.66 ಕೋಟಿ ರೂ.ಗಳ ಸಾಲ ಮಂಜೂರಾತಿ ಮಾಡಲಾಗಿದೆ. 2019–20ರಲ್ಲಿ 710 ಪ್ರಕರಣಗಳಿಗೆ 667.81 ಕೋಟಿ ರೂ.ಗಳನ್ನು ಮಂಜೂರಾತಿ ಮಾಡಲಾಗಿತ್ತು. 31.3.2021ರವರೆಗೆ 1,74,662 ಪ್ರಕರಣಗಳಿಗೆ 18,286.38 ಕೋಟಿ ರೂ.ಗಳ ಸಂಚಿತ ಸಾಲ ಮಂಜೂರು ಮಾಡಲಾಗಿದೆ.

**ವಿತರಣೆ:**

2020–21ನೇ ಸಾಲಿನಲ್ಲಿ ಸಂಸ್ಥೆ 432.96 ಕೋಟಿ ರೂ.ಗಳನ್ನು ವಿತರಣೆ ಮಾಡಿದೆ. ಕಳೆದ ವರ್ಷ 727.90 ಕೋಟಿ ರೂ. ಗಳನ್ನು ವಿತರಣೆ ಮಾಡಿತ್ತು. 31.03.2021ರವರೆಗಿನ ಸಂಚಿತ ವಿತರಣೆ 14,389.83 ಕೋಟಿ ರೂ.ಗಳಷ್ಟು ತಲುಪಿದೆ.

**ಬಂಡವಾಳ, ಉತ್ಪನ್ನಗಳ ಮೌಲ್ಯ ಮತ್ತು ಉದ್ಯೋಗ:**

2020–21ನೇ ಸಾಲಿನಲ್ಲಿ ಸಂಸ್ಥೆಯಿಂದ ನೀಡಲಾದ ಸಾಲಗಳು 2,574.60 ಕೋಟಿ ರೂ.ಗಳಷ್ಟು ಹೂಡಿಕೆ ಮಾಡಬಹುದೆಂದು ಅಂದಾಜು ಮಾಡಲಾಗಿದ್ದು ಉತ್ಪಾದನೆಯ ಮೌಲ್ಯ 1,616.80 ಕೋಟಿ ರೂ. ಗಳಾಗಿದ್ದು, 5,169 ಜನರಿಗೆ ಉದ್ಯೋಗ ಸೃಷ್ಟಿಸುವ ಅಂದಾಜಿಸಲಾಗಿದೆ.

**ವಸೂಲಾತಿ:**

ಪ್ರಸ್ತುತ 2020–21ರ ವರ್ಷದಲ್ಲಿ ಸಂಸ್ಥೆ ಒಟ್ಟು 638.68 ಕೋಟಿ ರೂ.ಗಳನ್ನು ವಸೂಲಾತಿ ಮಾಡಿತು. ಕಳೆದ ವರ್ಷ ಸಂಸ್ಥೆಯು 720.85 ಕೋಟಿ ರೂ.ಗಳನ್ನು ವಸೂಲಿ ಮಾಡಿತ್ತು. ಪ್ರಸ್ತುತ ವರ್ಷದಲ್ಲಿ ವಸೂಲಾಗದ ಸಾಲಗಳಿಂದ [D-III(Pre MOU), D-III (Prudential), D-III(MR)] ಸಂಸ್ಥೆಯು 44.53 ಕೋಟಿ ರೂ.ಗಳನ್ನು ವಸೂಲಾತಿ ಮಾಡಲಾಗಿದೆ.

**ಸಂಸ್ಥೆಯಿಂದ ಕೋವಿಡ್–19ರ ಸಾಂಕ್ರಾಮಿಕ ಸೊಂಕು ಅವಧಿಯಲ್ಲಿ ಸಾಲಗಾರರಿಗೆ ಒದಗಿಸಿರುವ ಸೌಲಭ್ಯಗಳು :**

ಕೋವಿಡ್–19ರ ಸಾಂಕ್ರಾಮಿಕ ಪಿಡುಗಿನ ಸನ್ನಿವೇಶದಲ್ಲಿ ಆರ್‌ಬಿಐ / ಸಿಡ್ಬಿ ಸಂಸ್ಥೆಗಳು ಘೋಷಿಸಿದ ಪರಿಹಾರ ಕ್ರಮಗಳ ಅನ್ವಯ ಸಂಸ್ಥೆಯು ಸಾಲಗಾರರಿಗೆ ಈ ಕೆಳಗಿನ ಸವಲತ್ತುಗಳನ್ನು ನೀಡಿದೆ:–

- ದಿನಾಂಕ 01.04.2020 ರಿಂದ 31.08.2020ರ ನಡುವಿನ ಅವಧಿಯಲ್ಲಿ ಪಾವತಿಸಬೇಕಿದ್ದ ಅಸಲು ಕಂತುಗಳನ್ನು ಮುಂದೂಡಲಾಯಿತು.

- ದಿನಾಂಕ 10.09.2020 ರಂದು ಪಾವತಿಸಬೇಕಾದ ಬಡ್ಡಿ ಮತ್ತು ಅಸಲು ಕಂತಿನೊಂದಿಗೆ ದಿನಾಂಕ 01.04.2020 ರಿಂದ 31.08.2020ರ ನಡುವಿನ ಅವಧಿಯಲ್ಲಿ ಪಾವತಿಸಬೇಕಾಗಿದ್ದ ಬಡ್ಡಿ ಬಾಕಿಯನ್ನು ದಿನಾಂಕ 10.09.2020ರಂದು ಪಾವತಿಸಲು ಅನುವು ನೀಡಲಾಯಿತು.

- ದಿನಾಂಕ 01.04.2020 ರಿಂದ 31.08.2020ರ ವಿರಾಮ (Moratorium period) ಅವಧಿಯಲ್ಲಿ ಗ್ರಾಹಕರಿಗೆ ಅಸಲು (Principal) ಮತ್ತು ಬಡ್ಡಿಯ (Interest) ಕಂತುಗಳನ್ನು ವಿಧಿಸಿರುವುದಿಲ್ಲ. ಹಾಗೂ ಈ ವಿರಾಮ (Moratorium period) ಅವಧಿಯಲ್ಲಿ ಗ್ರಾಹಕರಿಗೆ ಯಾವುದೇ ದಂಡ (Penal) ಮತ್ತು ಚಕ್ರಬಡ್ಡಿ (Compound Interest) ಯನ್ನು ವಿಧಿಸಲಿಲ್ಲ.

- ಕರ್ನಾಟಕ ರಾಜ್ಯ ಸರ್ಕಾರದ ಬಡ್ಡಿ ಸಹಾಯಧನ ಯೋಜನೆಗೊಳಪಡುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳಾ ಉದ್ದಿಮೆದಾರರು / ಮೊದಲ ಪೀಳಿಗೆ / ಸಾಮಾನ್ಯ ಯೋಜನೆಯಡಿಯಲ್ಲಿನ ಸಾಲಗಳಿಗೆ ಮರುಪಾವತಿಯ ಕಂತುಗಳಲ್ಲಿ ಬಡ್ಡಿ ಸಹಾಯಧನವನ್ನು ಹೊರತುಪಡಿಸಿ ಉಳಿದ ಮೊತ್ತವನ್ನು ಪಾವತಿಸಲು ಅನುವು ಮಾಡಲಾಯಿತು.

- ಅಸಲು ಕಂತುಗಳ ಮರುಪಾವತಿ ಅವಧಿಯನ್ನು ಘಟಕವಾರು ಪರಿಸ್ಥಿತಿಯನ್ವಯ ಗ್ರಾಹಕರ ಕೋರಿಕೆ ಮೇರೆಗೆ ಎರಡು ವರ್ಷಗಳವರೆಗೆ ವಿಸ್ತರಿಸಿ (ಈಗಾಗಲೇ ನೀಡಿರುವ ವಿರಾಮ ಅವಧಿಯ 5 ತಿಂಗಳುಗಳು ಸೇರಿ) ಮರು ರೂಪಿಸಲಾದ ಸೌಲಭ್ಯವನ್ನು ಪ್ರವಾಸೋದ್ಯಮ ಹಾಗೂ ನಿರ್ಮಾಣ ಮತ್ತು ರಿಯಲ್ ಎಸ್ಟೇಟ್ ವಲಯಗಳಿಗೆ ಆದ್ಯತೆ ಮೇಲೆ ನೀಡಲಾಯಿತು.

- ಸರ್ಕಾರದ ಬಡ್ಡಿ ಸಹಾಯಧನ ಸೌಲಭ್ಯವಿಲ್ಲದ ಘಟಕಗಳಿಗೆ 01.04.2020 ರಿಂದ 31.08.2020ರವರೆಗೆ ಪಾವತಿಸಬೇಕಾಗಿದ್ದ ಬಾಕಿ ಬಡ್ಡಿ ಮೊತ್ತವನ್ನು ಸುಲಭ ಕಂತುಗಳಲ್ಲಿ ದಿನಾಂಕ 31.03.2021ರ ಒಳಗೆ ಪಾವತಿಸಲು ಅವಕಾಶ ಮಾಡಿಕೊಡಲಾಯಿತು. ಈ ಸಾಲಗಳಿಗೆ ಶೇ.10.00(p.a) ಬಡ್ಡಿ ದರದಲ್ಲಿ ರಿಯಾಯಿತಿಯನ್ನು ನೀಡಲಾಯಿತು.

**ಸಂಸ್ಥೆಯಿಂದ 2020–21ರ ಆರ್ಥಿಕ ಸಾಲಿನಲ್ಲಿ ಸಾಲಗಾರರಿಗೆ ಕೆಳಕಂಡ ಸೌಲಭ್ಯಗಳನ್ನು ಸಹ ವಿಸ್ತರಿಸಲಾಗಿದೆ :–**

- ಸೂಕ್ಷ್ಮ, ಸಣ್ಣ, ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಸಾಲಗಳ ಮೇಲಿನ ಬಡ್ಡಿ ದರವನ್ನು ಶೇ.14 ರಿಂದ ಶೇ.11.50ಕ್ಕೆ (ನಿವ್ವಳ ಶೇ. 0.5 ರಿಯಾಯಿತಿಯಲ್ಲಿ) ಕಡಿತಗೊಳಿಸಿದೆ.

- ಅವಧಿಪೂರ್ವ ಸಾಲ ಮರುಪಾವತಿಗೆ ವಿಧಿಸುವ ದಂಡವನ್ನು ಸ್ಥಗಿತಗೊಳಿಸಲಾಗಿದೆ ಮತ್ತು ಬ್ಯಾಂಕ್ ಹಾಗೂ ಇತರೆ ಹಣಕಾಸು ಸಂಸ್ಥೆಗಳಿಗೆ ವರ್ಗಾಯಿಸುವ ಸಾಲಗಳ ಮೇಲಿನ ದಂಡವನ್ನು ಶೇ.2 ರಿಂದ ಶೇ.1 ಕ್ಕೆ ಕಡಿತಗೊಳಿಸಲಾಗಿದೆ.

**ಹಣಕಾಸು ಫಲಿತಾಂಶಗಳು:**

ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು 484.09 ಕೋಟಿ ರೂ.ಗಳ ಒಟ್ಟಾರೆ ಆದಾಯವನ್ನು ಗಳಿಸಿದ್ದು, ಕಳೆದ ಆರ್ಥಿಕ ವರ್ಷದಲ್ಲಿ ಈ ಆದಾಯವು 358.81 ಕೋಟಿ ರೂ.ಗಳಾಗಿತ್ತು. ಲಾಭವು 42.90 ಕೋಟಿ ರೂ.ಗಳಷ್ಟಾಗಿದೆ.

**ಲಾಭಾಂಶ :**

2020–21ರ ಹಣಕಾಸು ವರ್ಷದಲ್ಲಿಯೂ ಮುಂದುವರೆದ ನಷ್ಟವಿದ್ದುದರಿಂದ (carry forward losses) ಸಂಸ್ಥೆಯ ವತಿಯಿಂದ ಯಾವುದೇ ರೀತಿಯ ಲಾಭಾಂಶವನ್ನು ಶಿಫಾರಸ್ಸು ಮಾಡಿರುವುದಿಲ್ಲ.

**ಖಜಾನೆ ಚಟುವಟಿಕೆ:**

ಪ್ರಸಕ್ತ ವರ್ಷದಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ರೂ.100.00 ಕೋಟಿ ಈಕ್ವಿಟಿ ಷೇರು ಬಂಡವಾಳ ನೀಡಿರುತ್ತದೆ.. ದಿನಾಂಕ 31.3.2021ರ ಅಂತ್ಯಕ್ಕೆ ರೂ.795.39 ಕೋಟಿ ಈಕ್ವಿಟಿ ಷೇರು ಬಂಡವಾಳವಿರುತ್ತದೆ ಹಾಗೂ ಕಳೆದ ವರ್ಷದ ಅಂತ್ಯಕ್ಕೆ ರೂ.476.94 ಕೋಟಿ ಇರುತ್ತದೆ. ಪ್ರಸ್ತುತ ವರ್ಷದಲ್ಲಿ ರೂ.318.45 ಕೋಟಿ ಷೇರು ಅರ್ಜಿ ಮೊತ್ತವನ್ನು ಷೇರು ಬಂಡವಾಳವಾಗಿ ಪರಿವರ್ತಿಸಲಾಗಿದೆ. ದಿನಾಂಕ 31.3.2021ರ ಅಂತ್ಯಕ್ಕೆ ರೂ.100.00 ಕೋಟಿ ಷೇರು ಅರ್ಜಿ ಮೊತ್ತವಿರುತ್ತದೆ.

ಪ್ರಸಕ್ತ ವರ್ಷದಲ್ಲಿ ಸಂಸ್ಥೆಯು ರೂ.217.00 ಕೋಟಿ ಬಾಂಡುಗಳನ್ನು ಪಾವತಿಸಿದೆ. ಬಾಕಿ ಉಳಿದ ಬಾಂಡುಗಳು 850.00 ಕೋಟಿ ರೂ.ಗಳಿಗೆ ಇಳಿಕೆಯಾಗಿದ್ದು ಈ ಮೊತ್ತ 31.03.2020ರ ಅಂತ್ಯಕ್ಕೆ 1067.00 ಕೋಟಿ ರೂ.ಗಳಷ್ಟಿತ್ತು.

ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ಭಾರತೀಯ ಸ್ಟೇಟ್ ಬ್ಯಾಂಕಿನಿಂದ 150.00 ಕೋಟಿ ರೂ.ಗಳ ಅವಧಿಸಾಲವನ್ನು ಪಡೆಯಲಾಗಿ ಹಾಗೂ 43.09 ಕೋಟಿ ರೂ.ಗಳು ಹಾಗೂ ದ್ವೈಮಾಸಿಕ 100.10 ಕೋಟಿ ರೂ.ಗಳ ಅವಧಿ ಸಾಲದ ಮರುಪಾವತಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಅಫ್ ಇಂಡಿಯಾಗಳಿಗೆ ಅನುಕ್ರಮವಾಗಿ ಮರುಪಾವತಿಸಿದೆ.

2019–20ರಲ್ಲಿನ ಬಾಂಡ್‌ಗಳ ಮೇಲಿನ ಬಡ್ಡಿಯು 110.43 ಕೋಟಿ ರೂ.ಗಳಿಂದ ಪ್ರಸ್ತುತ 2020–21ರ ಹಣಕಾಸು ವರ್ಷದಲ್ಲಿ 85.80 ಕೋಟಿ ರೂ.ಗಳಿಗೆ ಇಳಿಕೆಯಾಗಿದೆ. ಬಾಂಡ್ ಹೊಣೆಗಾರಿಕೆ ಕಡಿಮೆಯಾದ ಕಾರಣ ಬಡ್ಡಿ ಮೊತ್ತ ಇಳಿಕೆಯಾಗಿದೆ. ಮುಂದುವರಿದು ಸಂಸ್ಥೆಯು 20.62 ಕೋಟಿ ರೂ.ಗಳು ಹಾಗೂ 20.12 ಕೋಟಿ ರೂ.ಗಳ ಅವಧಿಸಾಲದ ಮೇಲಿನ ಬಡ್ಡಿಯ ಮರುಪಾವತಿಯನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಅಫ್ ಇಂಡಿಯಾಗಳಿಗೆ ಅನುಕ್ರಮವಾಗಿ ಮರುಪಾವತಿಸಿದೆ. ಪ್ರಸ್ತುತ ವರ್ಷದಲ್ಲಿ ಸಂಸ್ಥೆಯು ಕರ್ನಾಟಕ ಸರ್ಕಾರಕ್ಕೆ ಖಾತರಿ ಕಮಿಷನ್ನಿನ ರೂಪದಲ್ಲಿ 14.50 ಕೋಟಿ ರೂ.ಗಳನ್ನು (ಜಿ.ಎಸ್.ಟಿಯ ನಿವ್ವಳದಲ್ಲಿ) ಪಾವತಿಸಿದ್ದು, 2019–20 ಸಾಲಿನಲ್ಲಿ ಈ ಮೊತ್ತವು 13.44 ಕೋಟಿ ರೂ.ಗಳಷ್ಟಿತ್ತು (ಜಿ.ಎಸ್.ಟಿಯ ನಿವ್ವಳದಲ್ಲಿ).

ಸಂಸ್ಥೆಯ ಒಟ್ಟು ದೀರ್ಘಾವಧಿ ಸಾಲವು 31–03–2020ರ ವರ್ಷಾಂತ್ಯಕ್ಕೆ 1,561.52 ಕೋಟಿ ರೂ.ಗಳಿಂದ 31.03.2021 ಅಂತ್ಯಕ್ಕೆ 1,301.34 ಕೋಟಿ ರೂ.ಗಳಿಗೆ ಇಳಿಕೆ ಕಂಡಿದೆ. 2020–21ನೇ ಸಾಲಿನ ಒಟ್ಟು ಬಡ್ಡಿ ಮತ್ತು ಆರ್ಥಿಕ ವೆಚ್ಚಗಳು 143.03 ಕೋಟಿ ರೂ.ಗಳಿಗೆ ಏರಿಕೆ ಕಂಡಿದ್ದು, 2019–20ನೇ ವರ್ಷಕ್ಕೆ 136.63 ಕೋಟಿ ರೂ.ಗಳಷ್ಟಿತ್ತು.

**ವ್ಯವಹಾರ ಅಭಿವೃದ್ಧಿ ಮತ್ತು ಸಾಲಗಳ ಸಂಶೋಧನೆ:**

ಸಂಸ್ಥೆಯ ವ್ಯವಹಾರವನ್ನು ಉತ್ತೇಜಿಸಲು ವಿಶೇಷ ಆಕರ್ಷಕ ಯೋಜನೆಗಳಾದ ಮಹಿಳಾ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಹಾಗೂ ಇತರೇ ಉದ್ಯಮಗಳಿಗೆ ಲಭ್ಯವಿರುವ ವಿಶೇಷ ಯೋಜನೆಗಳ ಪ್ರಚಾರಕ್ಕಾಗಿ ದೈನಿಕ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಕಾರ್ಯವನ್ನು ಹಾಗೂ ಮಾರುಕಟ್ಟೆ ಸಮೀಕ್ಷೆ, ಮಾರುಕಟ್ಟೆ ವಿಶ್ಲೇಷನಾ ವರದಿಗಳನ್ನು ಸಾಲ ಮಂಜೂರಾತಿಗಾಗಿ ಸಿದ್ಧಪಡಿಸಲಾಯಿತು. ಪ್ರಸ್ತುತ ವರ್ಷದಲ್ಲಿ, ಸಂಸ್ಥೆಯಿಂದ ನವೀಕೃತ ಸಾಲ ನೀತಿ 2020ನ್ನು ಅನುಷ್ಠಾನಗೊಳಿಸಲಾಯಿತು.

ಸಂಸ್ಥೆಯು ಪ್ರಸ್ತುತ ವರ್ಷ ಬೆಂಗಳೂರು ಟೆಕ್ ಶೃಂಗಸಭೆ 2020, ಏರ್ ಶೋ ಹಾಗೂ ಕೈಗಾರಿಕಾ ಸಂಘ ಸಂಸ್ಥೆಗಳಾದ KASSIA, FKCCI, AWAKE ಆಯೋಜಿಸಿದ ಕೈಗಾರಿಕಾ ಹಾಗೂ ಉದ್ಯಮಿಗಳ ಸಮಾವೇಶ ಸಮಾರಂಭಗಳಲ್ಲಿ ಭಾಗವಹಿಸಲಾಯಿತು. ಸಂಸ್ಥೆಯ ವತಿಯಿಂದ ರೂ.1.04 ಲಕ್ಷಗಳನ್ನು ವಿವಿಧ ಸಂಘ ಸಂಸ್ಥೆಗಳಿಗೆ ದೇಣಿಗೆ ನೀಡಲಾಯಿತು.

ಸಂಸ್ಥೆಯು ಹೊರತರುವ ದ್ವೈಮಾಸಿಕ, KSFC NEWS ಪ್ರತಿಕೆಯಲ್ಲಿ ಸಂಸ್ಥೆಯ ಅಕರ್ಷಕ ಯೋಜನೆಗಳ ಮಾಹಿತಿಯನ್ನು ಪ್ರಕಟಿಸಲಾಯಿತು.

**ಹಣಕಾಸು ಸೇವೆಗಳ ಚಟುವಟಿಕೆಗಳು:**

ಸಾಮಾನ್ಯ ವಿಮಾ ಉತ್ಪನ್ನಗಳ ಮಾರಾಟಕ್ಕಾಗಿ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಹಾಗೂ ಇಫ್ಕೊ ಟೋಕಿಯೋ ಜನರಲ್ ಇನ್ಸೂರೆನ್ಸ್ ಕಂಪನಿಗಳೊಡನೆ ಸಂಸ್ಥೆಯು ಒಡಂಬಡಿಕೆ ಮಾಡಿಕೊಂಡಿದ್ದು, ಕಾರ್ಪೊರೇಟ್ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸುತ್ತ 2020–21 ಆರ್ಥಿಕ ವರ್ಷದಲ್ಲಿ ಸಂಸ್ಥೆಯು 458.41 ಲಕ್ಷ ರೂ.ಗಳಷ್ಟು ವಿಮಾ ಕಂತುಗಳ ಮೂಲಕ ವ್ಯವಹಾರ ನೀಡಿ, ಒಟ್ಟಾರೆಯಾಗಿ 58.56 ಲಕ್ಷ ರೂ.ಗಳ ಕಮಿಷನ್ ಗಳಿಸಿದೆ (ಎರಡು ಕಂಪನಿಗಳಿಂದ).

**ವಜ್ರಮಹೋತ್ಸವ ಸಮಾರಂಭ ಆಚರಣೆ:**

ವಜ್ರಮಹೋತ್ಸವ ಸಮಾರಂಭವನ್ನು ಜನವರಿ 30, 2021 ರಂದು ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಅಯೋಜಿಸಲಾಗಿತ್ತು.

ಸನ್ಮಾನ್ಯ ಮುಖ್ಯಮಂತಿಗಳಾದ ಶ್ರೀ.ಬಿ.ಎಸ್.ಯಡಿಯೂರಪ್ಪ, ಕರ್ನಾಟಕ ಸರ್ಕಾರ ಇವರು ವಜ್ರಮಹೋತ್ಸವ ಸ್ಮರಣ ಸಂಚಿಕೆ "Triumphant Sixty" ಯನ್ನು ಬಿಡುಗಡೆ ಮಾಡಿದರು. ಸನ್ಮಾನ್ಯ ಉಪಮುಖ್ಯಮಂತ್ರಿ ಡಾ:ಅಶ್ವಥನಾರಾಯಣ.ಸಿ.ಎನ್ ಹಾಗೂ ಸನ್ಮಾನ್ಯ ಶಿಕ್ಷಣ ಸಚಿವರು ಶ್ರೀ.ಎಸ್.ಸುರೇಶ್‌ಕುಮಾರ್ ಉಪಸ್ಥಿತರಿದ್ದರು.

ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಸಂಸ್ಥೆಯ ಹೊಸ ವಿನ್ಯಾಸೀಕೃತ ಜಾಲತಾಣ (Website)ನ್ನು ಅನಾವರಣಗೊಳಿಸಲಾಯಿತು. ಹೊಸ ವಿನ್ಯಾಸೀಕೃತ ಜಾಲತಾಣದಲ್ಲಿ ಸಂಸ್ಥೆಯ ಹಣಕಾಸು ಉತ್ಪನ್ನಗಳು, ಶಾಖಾ ಕಛೇರಿಗಳ ವಿವರ ಮತ್ತು ವಿಳಾಸ, ಸಂಸ್ಥೆಯಿಂದ ಮಹಿಳೆಯರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ ಉದ್ಯಮಿಗಳಿಗೆ ಲಭ್ಯವಿರುವ ವಿಶೇಷ ಸಾಲ ಯೋಜನೆಗಳ ವಿವರಗಳ ಹಾಗೂ ಸಂಸ್ಥೆಯ ಕಾರ್ಯಾಚರಣೆ ನೀತಿಗಳು ದೊರೆಯುತ್ತಿದೆ.

ಕಾಫೀ ಟೇಬಲ್ ಪುಸ್ತಕ – "Triumphant Sixty" ಸಂಸ್ಥೆಯಿಂದ ಹಣಕಾಸು ನೆರವು ಪಡೆದು ಯಶ್ವಸಿಯಾದ ಘಟಕಗಳ ವಿವರಗಳನ್ನು ಒಳಗೊಂಡಿದೆ.

**2021–22 ನೇ ಸಾಲಿನ ಮುನ್ನೋಟ:**

ಆರ್ಥಿಕ ವರ್ಷ 2020–21 ರ ಕೋವಿಡ್–19 ಸಂಕ್ರಾಮಿಕ ರೋಗವು ಆಘಾತಕಾರಿ ರೀತಿಯಲ್ಲಿ ದೇಶದ ಆರ್ಥಿಕ ಮತ್ತು ಆರೋಗ್ಯ ಬಿಕ್ಕಟ್ಟನ್ನು ಸೃಷ್ಟಿಸಿರುತ್ತದೆ. ಕರೋನ

ವೈರಸ್‌ನ್ನು ನಿಗ್ರಹಿಸಲು ಕೈಗೊಂಡ ಅಗತ್ಯವಾದ ಕ್ರಮಗಳು ಆರ್ಥಿಕ ಕುಸಿತವನ್ನು ಉಂಟು ಮಾಡಿರುತ್ತದೆ. ಕೋವಿಡ್–19 ಸಂಕ್ರಾಮಿಕ ಬಿಕ್ಕಟ್ಟಿನ ನಂತರದ ಚೇತರಿಕೆ ಅಂತರ್ಗತ ಮತ್ತು ಸುಸ್ಥಿರವಾಗಿಸಲು, ಹಣಕಾಸು ಸೇರ್ಪಡೆ ನೀತಿಯು ಆದ್ಯತೆಯಾಗಿ ಮುಂದುವರಿಯುತ್ತದೆ. 2020–21ರಲ್ಲಿ ರಾಜ್ಯ ಸರ್ಕಾರದ ಬೆಂಬಲದೊಂದಿಗೆ ಎಲ್ಲಾ ವರ್ಗದ ಉದ್ಯಮಿಗಳಿಗಾಗಿ ರೂಪಿತವಾಧ ನವೀಕೃತ ಶೇ.6ರ ಬಡ್ಡಿ ದರ ಸಾಲ ಯೋಜನೆಯು ಮುಂಬರುವ ಆರ್ಥಿಕ ವರ್ಷದಲ್ಲಿ ಹೆಚ್ಚಿನ ಮಂಜೂರಾತಿ ಹಾಗೂ ವಿತರಣೆಯ ಗುರಿ ಸಾಧಿಸಲು ಅನುಕೂಲವಾಗುವ ನಿರೀಕ್ಷೆಯಿದೆ.

**2021–22 ಕ್ಕೆ ಗುರಿ :**

2021–22ರಲ್ಲಿ ಈ ಕೆಳಗಿನ ವ್ಯವಹಾರವನ್ನು ಸಾಧಿಸುವ ಗುರಿಯನ್ನು ಸಂಸ್ಥೆಯು ಇರಿಸಿಕೊಂಡಿದೆ.

(ಕೋಟಿ ರೂ.ಗಳಲ್ಲಿ)

| | |
|---|---|
| ಮಂಜೂರಾತಿ | 700.00 |
| ವಿತರಣೆ | 600.00 |
| ವಸೂಲಾತಿ | 730.00* |

(*315.00 ಕೋಟಿ ರೂ.ಗಳ ಬಡ್ಡಿ ವಸೂಲಾತಿ ಒಳಗೊಂಡಂತೆ)

ಸಂಸ್ಥೆಯ ಕೆಲಸ ಕಾರ್ಯಗಳಿಂದ ಉತ್ತಮ ಪರಿಣಾಮ ಹೊರಹೊಮ್ಮುವ ರೀತಿಯಲ್ಲಿ ಸಂಯೋಜಿತ ಪ್ರಯತ್ನಗಳನ್ನು ಮಾಡಲಾಗುವುದು.

**ಕೃತಜ್ಞತೆಗಳು:**

ಕರ್ನಾಟಕ ಸರ್ಕಾರವು ಸಂಸ್ಥೆಗೆ ಈಕ್ವಿಟಿ ನೆರವಿನ ಬೆಂಬಲ, ಬಡ್ಡಿ ಸಹಾಯಧನ ಬೆಂಬಲ ಹಾಗೂ ಸಣ್ಣ ಪ್ರಮಾಣದ ಸಾಲದ ಖಾತೆಗಳನ್ನು ಮುಕ್ತಾಯಗೊಳಿಸಲು ಬೆಂಬಲ ನೀಡಿದ್ದಕ್ಕಾಗಿ ನನ್ನ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಸ್ಥೆಯ ಕಾರ್ಯಾಚರಣೆಯ ಪ್ರತಿಯೊಂದು ಹಂತದಲ್ಲೂ ಸಹಾಯ ಮತ್ತು ಮಾರ್ಗದರ್ಶನ ನೀಡಿದ್ದಕ್ಕಾಗಿ ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್, ಭಾರತೀಯ ರಿಸರ್ವ ಬ್ಯಾಂಕ್, ಭಾರತ ಸರ್ಕಾರ, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಈ–ಗವರ್ನೆನ್ಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ನಿರಂತರ ಬೆಂಬಲ ಹಾಗೂ ಮಾರ್ಗದರ್ಶನಕ್ಕಾಗಿ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಭಾರತೀಯ ಜೀವವಿಮಾ ನಿಗಮ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ, ಹೆಚ್.ಡಿ.ಎಫ್.ಸಿ ಬ್ಯಾಂಕ್, ಎಸ್.ಬಿ.ಐ ಜೀವವಿಮಾ ಕಂ.ಲಿ., ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ.ಲಿ., ಇಫ್ಕೋ–ಟೋಕಿಯೋ ಇನ್ಶೂರೆನ್ಸ್ ಕಂಪನಿ ಮತ್ತು ಕೈಗಾರಿಕಾ ಸಂಘ ಸಂಸ್ಥೆಗಳಾದ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ, ಅವೇಕ್, ಈ–ಮರ್ಜ್, ಭಾರತದ ಮಹಿಳಾ ಉದ್ಯಮಿಗಳ ಒಕ್ಕೂಟ, ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಮುಂತಾದುವುಗಳಿಗೂ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ವಾಣಿಜ್ಯ ಬ್ಯಾಂಕುಗಳು, ಅಫೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ವಲಯ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿಶ್ವೇಶ್ವರಯ್ಯ ವಾಣಿಜ್ಯ ಅಭಿವೃದ್ಧಿ ನಿಗಮ, ರಾಷ್ಟೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ, (NSIC), MSME-DI ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಉದ್ಯೋಗ ಮಿತ್ರ ಅವರ ಸಹಕಾರಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನಿರ್ದೇಶಕರುಗಳಾಗಿದ್ದು ತಮ್ಮ ಸ್ಥಾನಗಳಿಂದ ನಿರ್ಗಮಿಸುತ್ತಿರುವ ಶ್ರೀ ವಿ.ಚಂದ್ರಮೌಳಿ, ಶ್ರೀ ಕೆ.ಶ್ರೀನಿವಾಸ್ ರಾವ್ ಮತ್ತು ಶ್ರೀ ಜೆ.ಜಗದೀಶ್, ಅವರುಗಳು ತಮ್ಮ ಸೇವಾವಧಿಯಲ್ಲಿ ಸಲ್ಲಿಸಿದ ಸೇವೆಗಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಸಂಸ್ಥೆಯಿಂದ ನೆರವು ಪಡೆದಿರುವ ಎಲ್ಲಾ ಉದ್ದಿಮೆದಾರರು, ಸಂಸ್ಥೆಯ ಷೇರುದಾರರು ನೀಡಿದ ನಿರಂತರ ಸಹಾಯ ಹಾಗೂ ಸಂಸ್ಥೆಯ ಬಾಂಡ್‌ಗಳಲ್ಲಿ ಹಣ ತೊಡಗಿಸಿರುವ ಹೂಡಿಕೆದಾರರಿಗೂ ನಿರ್ದೇಶಕರ ಮಂಡಳಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇವರುಗಳು ಸಂಸ್ಥೆಗೆ ಸಕಾಲಕ್ಕೆ ಅವಧಿಸಾಲದ ನೆರವು ನೀಡಿರುವುದಕ್ಕೆ ವಿಶೇಷ ಕೃತಜ್ಞತೆ ಸಲ್ಲಿಸುತ್ತೇನೆ.

ಕೊನೆಯದಾಗಿ, ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮಕ್ಕಾಗಿ ಹೃತ್ಪೂರ್ವಕ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

ವಂದನೆಗಳು,

ಸ್ಥಳ : ಬೆಂಗಳೂರು **ಅಧ್ಯಕ್ಷರು**

ದಿನಾಂಕ : 27ನೇ ಜುಲೈ 2021

**Sri I S N Prasad, IAS**
**Chairman**
**Statement made at the**
**62nd Annual General Meeting**
**Held on 27th, July 2021**

**Dear Share Holders,**

It is my pleasure to welcome you all to the 62nd Annual General Meeting of our Corporation. I am delighted to present the 62nd Annual Report on the operations of the Corporation, together with, the audited statements of the accounts for the year ended 31st March 2021.

During the Financial Year 2020-21, the Corporation consolidated its financial position and recorded profits by registering a profit of ₹ 42.90 crore. The performance of the Corporation is remarkable in the face of severe economic distress caused on account of COVID-19 pandemic.

The Directors' report and the audited financial statements of accounts for the 62nd year ended 31st March 2021 have already been placed with you. I presume you have had an opportunity to go through the report and hence I will take it as read. However, I would like to take this opportunity to share with you some of the salient aspects of the report.

**Global Economy :**

The global economy is set to expand by 5.6 percent in 2021- its strongest post-recession pace in 80 years - in part underpinned by steady but highly unequal vaccine access. The global recovery is

highly uneven, growth is concentrated in a few major economies, with most emerging market and developing economies(EMDEs) lagging behind.

The recovery is expected to continue into 2022, with global growth moderating to 4.3 percent. While about 90 percent of advanced economies are expected to regain their pre-pandemic per capita income levels by 2022, only about one-third of EMDEs are projected to do the same. As a result, per capita income catch-up with advance economies is expected to slow or even reverse in many poorer countries.

**Indian Economy :**

The year 2020 was predominated by the COVID-19 pandemic, posing the most formidable economic challenge to India and to the world, since the Global Financial Crisis.

The growth in GDP during 2020-21 is estimated at (-)8.0 percent as compared to 4.0 percent in 2019-20. Agricultural activities for rabi harvesting and kharif sowing were largely unaffected by the COVID 19 induced lockdown. Industry and Services are estimated to contract by 9.6 per cent and 8.8 per cent during the year. Within Industry, Mining is estimated to contract by 12.4 per cent, Manufacturing by 9.4 per cent and construction by 12.6 per cent. The utilities sector has shown a sharp recovery and is set to register a positive growth of 2.7 per cent in 2020-21. Within Service Sector, trade, hotels, transport & communication are estimated to contract by 21.4 per cent.

**Karnataka Economy :**

The COVID-19 pandemic has caused an unprecedented human and health crisis. The effects of lockdown period have been severely felt because the production, consumption, exchange

and other interdependent economic activities have crippled industry at the National level and within the state. Losses of employment and income have severely impacted the workers in the informal (including unorganized) sector and poorer families who are unprotected by statutory social security measures. Despite the challenges and hardships imposed by the pandemic, the achievements of Karnataka state are noteworthy.

The advance estimates of Gross State Domestic Product [GSDP] of Karnataka for the FY 2020-21 highlights that at constant(2011-12) prices the GSDP is likely to attain a level of ₹ 11,13,818.00 crore with a growth of (-)2.6 due to lockdown measures imposed to control COVID-19 pandemic.

The state ranks number one in India Innovation Index as well as in Renewable Energy. Its ranks 2nd in Milk production. State Contributed 8% GDP of India and 40% to the country's IT exports.

The Per Capita state income (i.e. as per capita NSDP) of Karnataka at current prices is estimated to be ₹2,26,796 showing a rise of 1.6% during 2020-21, as against ₹2,23,175 in 2019-20.

The Contribution of agriculture sector to the overall GSDP saw a marginal increase from 12.16% to 13.15% in 2020-21 as against 2019-20. Industry sector saw a marginal decrease from 21.68% to 20.31% in 2020-21 against 2019-20. The Service sector the largest component of GSDP saw a marginal increase from 66.16% in 2019-20 to 66.53% in 2020-21. The contribution of Real Estate professional service and ownerships of dwellings' is highest with (33.46%) in 2020-21 followed by manufacturing (13.11%), trade and repair services(10.38%) and crops(8.57%).

Total export performance during 2020-21 (upto February 2021) is US$ 84,807.05 million. The share of Electronics and Computer Software is 84% [US$ 71,629.03] and merchandise exports share

is 16% [US$ 13,178.02 million]. Share of the state in Country's total export is 19%.

During the FY 2020-21 State Level Single Window Clearance Committee (SLSWCC) approved is ₹15,270.66 crore towards 307 projects, which is projected to generate employment of 85,694 in the state. State High Level Clearance Committee (SLSWCC) approved ₹37,464.10 crore towards 09 projects, which is projected to generate employment of 25,909 in the state

Karnataka accounts for a significant share in the total FDI that flows into India. Karnataka's share in total FDI inflow into India is USD 3,660 Million during 2020-21 (Up to November 2020), which is 12 percent of India's total FDI inflow of US$ 30,004 Million.

MSMEs form an integral part in Karnataka's industrial growth. During 2020-21[till june] 82,227 MSMEs have been registered in the state with an investment of ₹18,08,442.00 lakhs and projected to provide employments to 5,42,890 person

**STATE GOVERNMENT SUPPORT TO KSFC :**

During the FY2020-21, the Government of Karnataka provided an equity capital of ₹100.00 crore and interest subsidy of ₹172.25 crore under various schemes operated from KSFC as per details indicated below:

| | | |
|---|---|---|
| 1 | Scheduled Caste Entrepreneurs: | ₹ 42.50 crore |
| 2 | Scheduled Tribes Entrepreneurs: | ₹ 12.00 crore |
| 3 | Women Entrepreneurs: | ₹ 67.75 crore |
| 4 | First Generation Entrepreneurs: | ₹ 3.00 crore |
| 5 | Interest Subvention Scheme for All Categories Entrepreneurs: | ₹ 47.00 crore |
| | **Total** | **₹172.25 crore** |

## SUBSIDIES & GRANTS-IN-AID :

Under Textile Grant Scheme for Scheduled Caste and Scheduled Tribe Entrepreneurs, a grant amount of ₹20.56 crore was released by Government of Karnataka during the FY 2020-21.

## IMPORTANT POLICY DECISIONS DURING FY 2020-21 :

- Modification of Lending Policy.
- Identification and Prudential write off of doubtful / loss assets.
- Covid-19 Regulatory Package.
- Freezing of Interest in respect of Pre-MoU Doubtful-III & MR Cases.
- Up gradation of IT Infrastructure at KSFC.
- Modified Interest Subvention / Subsidy scheme for new & existing Micro & Small manufacturing enterprises and manufacturing allied service activities enterprises.
- Amendment to Cadre & Recruitment Rules and revision in the manpower strength of the Corporation.

## OPERATIONAL HIGHLIGHTS :

### SANCTIONS :

During the FY 2020-21, Sanction of loans under various schemes touched ₹ 401.66 crores covering 445 cases as against ₹ 667.81 crore covering 710 cases during FY 2019-20. Cumulative Sanctions reached ₹ 18,286.38 crore covering 1,74,662 cases as on 31.3.2021.

### DISBURSEMENT :

During the FY 2020-21, the disbursement was ₹ 432.96 crore as against ₹ 727.90 crore during FY 2019-20. The cumulative disbursement of the Corporation reached ₹14,389.83 crore as on 31.03.2021.

**INVESTMENT, VALUE OF OUTPUT AND EMPLOYMENT :**

The investment catalyzed by the Corporation during FY 2020-21 is expected to be ₹ 2,574.60 crore resulting in value of output to ₹ 1,616.80 crore and generating employment to 5169 persons.

**RECOVERY :**

During the FY 2020-21, the Corporation recovered an amount of ₹638.68 crore as compared to ₹720.85 crore recovered in the previous financial year. The Corporation realized recovery of ₹44.53 crore in respect of Bad Debts [D-III(Pre MOU), D-III (Prudential), D-III (MR)] during FY 2020-21.

**Facilities extended by Corporation to the borrowers during COVID-19 – Pandemic period :**

In the wake of COVID-19 situation, based on the relief measurers announced by RBI/SIDBI the Corporation has extended following to the borrowers.

- Monthly principal installments falling due between 01-04-2020 and up to 31-08-2020 were postponed.
- Similarly, Interest installments falling due between 01-04-2020 to 31-08-2020 is deferred and the entire interest for this period is demanded on 10-09-2020 along with the interest and principal demand of 10-09-2020.
- No Principal and/or Interest installments are demanded during the moratorium period between 01-04-2020 to 31-08-2020. Further, no penal and compound interest is charged during this moratorium period.
- In respect of units covered under Interest Subsidy schemes of Government of Karnataka for Scheduled Caste/Scheduled Tribe/Women Entrepreneurs/First Generation/General category, the borrowers have been allowed to make payment

of the demanded amount excluding the interest subsidy component.

- ➢ Rescheduling of Principal installments by extending repayment period up to 2 years (including moratorium of 5 months already given) has been considered to units in Hospitality and CRE Sectors.
- ➢ Funding of interest dues is considered on case to case basis at concessional rate of interest at 10% p.a. and to be repaid before 31-03-2021.

**The Corporation has also extended the following facility to the borrowers during FY 2020-21 year:**

- The Corporation has revised the interest rates downwards for MSME loans from 14% p.a. to 12% p.a. with a rebate of 0.5% p.a.
- Pre-payment penalty has been discontinued and reduced the foreclosure premium to 1% from 2% and made this applicable only in respect of Standard accounts closed by way of take over by Banks and Financial Institutions.

**FINANCIAL RESULTS :**

During the financial year under review, the Corporation earned a gross revenue of ₹484.09 crore as against ₹358.81 crore in FY 2019-20. The profit for the FY 2020-21 is ₹42.90 crore.

**DIVIDEND :**

Because of carry forward looses, no dividend is recommended for the financial year 2020-21.

**TREASURY ACTIVITY :**

During the year, the Government of Karnataka provided an equity capital ₹100.00 crore. As on 31-03-2021, the paid up equity capital of the Corporation stood at ₹795.39 crore, as compared to

previous year ₹476.94 crores. During the year ₹318.45 crore of share application money converted into share capital. The share application money as on 31.3.2021 stood at ₹100.00 crore.

During the year the Corporation redeemed bonds amounting to ₹217.00 crores. The outstanding of bonds decreased to ₹850.00 crore, which was ₹1067.00 crore as on 31.3.2020.

During the year, the Corporation has availed Term Loan of ₹150.00 crore from State Bank of India. Further the Corporation has repaid ₹43.09 crore to State Bank of India and ₹100.10 crore to Union Bank of India towards Term loan repayment.

The interest cost on bonds decreased to ₹85.80 crore from ₹110.43 crore from the year 2019-20. The decrease is on account of reduction of bond liability. Further, the Corporation has paid ₹20.62 crore to State Bank of India and ₹20.12 crore to Union Bank of India towards interest on term loan. The Corporation paid, on cash basis, ₹14.50 crore (net off of GST) to the State Government as guarantee commission during the year compared to ₹13.44 crore (net off of GST) for the FY 2019-20.

The total long-term liability of the Corporation is decreased to ₹1301.34 crore by the year end from ₹1561.52 crore as on 31-03-2020. The total interest and financial expenses increased to ₹143.03 crore for the year 2020-21 from ₹136.63 crore for the year 2019-20.

**BUSINESS DEVELOPMENT & CREDIT RESEARCH :**

The Corporation has taken major promotional activities to create awareness of special schemes of the Corporation. During the year Corporate advertisements were printed and released to popularize the special interest subsidy schemes meant & available for women, scheduled caste and tribes entrepreneurs

and MSMEs sector in leading Kannada and English dailies.

Special market research, market survey and market study were conducted to analyze scope and demand, market viability of loan proposals and products etc., based on requirement of the Branch offices / loan proposals.

Modified Lending Policy 2020 was introduced for smooth lending and timely loan sanction.

The Corporation also participated in several industry related programmes like Bengaluru Tech Summit 2020 [virtual], AERO Show 2020 of GoI. The Corporation participated several events organized by state level industrial bodies like KASSIA, FKCCI, AWAKE etc., apart from industrial associations at district level. A bi-monthly magazine “KSFC NEWS” is published and circulated to create awareness about special schemes for special segments.

**FINANCIAL SERVICE ACTIVITIES :**

KSFC is acting as a Corporate Agent for marketing of general insurance products. During the FY2020-21, the Corporation has earned a commission of ₹58.56 lakhs from both the insurance companies by giving a business of ₹458.41 lakhs in the form of insurance premium.

**CELEBRATION OF DIAMOND JUBILEE :**

“Diamond Jubilee function was organized at Banquet Hall of Vidhana Soudha, Bangalore on 30th January’ 2021.

Sri.B.S.Yediyurappa, Hon’ble Chief Minister, Govt. of Karnataka released KSFC’s Diamond Jubilee Souvenir - Triumphant Sixty. Dr. Ashwathnarayan.C.N., Hon’ble Deputy Chief Minister, Sri.S.Suresh Kumar, Hon’ble Minister of Primary and Secondary Education were also present to grace the function.

Hon’ble Chief Minister, also unveiled the Official Website of KSFC containing the information of KSFC, its Branch offices Network, Details of products and services of KSFC – especially special schemes meant for Women, Scheduled Caste & Tribes, Minority, Backward classes and other entrepreneurs. Newly designed web site provides full information about the Corporation & its performance in the past 61 years.

Coffee Table book -Triumphant Sixty contains the glimpses of success stories of few assisted units by the Corporation.

**FUTURE OUTLOOK FOR FY 2021-22:**

The COVID-19 pandemic has caused an unprecedented human and health crisis. The effects of lockdown period have severly crippled economic activities. In order to make the post-pandemic recovery more inclusive and sustainable, financial inclusion would continue to be our policy priority. Reintroduction of modified 6% interest subvention scheme in 2020 would help MSMEs, avail finance at concessional rates and also increase the business for the Corporation.

**TARGET FOR FY 2021-22:**

The Corporation for the financial year 2021-22 has set the following operational targets:

| | |
|---|---|
| Sanction: | ₹700.00 crore |
| Disbursement: | ₹600.00 crore |
| Recovery: | ₹730.00*crore |

(*including Interest Recovery of ₹315.00 crore)

Concerted efforts will be made to achieve the target and to improve the working results of the Corporation.

## ACKNOWLEDGMENT:

I take this opportunity to place on record its special thanks and gratitude to the Government of Karnataka for all the support extended for the settlement of small loans, interest subsidy and equity support.

Special thanks to SIDBI, RBI, Government of India, i.e., Department of Finance, Industries & Commerce, E-Governance, Social Welfare, Horticulture, Information and Public relations, Information Technology, Women and Child Welfare for their continued support.

I express my sincere thanks to LIC of India, HDFC Bank, SBI Life Insurance company Limited, SHCIL, Iffco Tokio and Industrial Bodies viz: KASSIA, FKCCI, AWAKE, e-merg, COWE, CII & other industrial associations. I also express thanks to the Commercial Banks, Apex Bank, KSSIDC, KIADB, KPTCL, VTPC, NSIC, MSME-DI and Karnataka Udyoga Mirta for their co-operation.

I would like to thank outgoing directors Sri. V Chandramouli, Sri. K Srinivas Rao and Sri. J Jagadish for the guidance, support and contribution made during their tenure as directors.

I thank the entrepreneurs for reposing faith in the Corporation, profuse gratitude to the shareholders for their unstinted support and the investors in the bond issues of the Corporation. I also thanks State Bank of India & Union Bank of India for their timely sanction of term loans.

Finally, I wish to acknowledge the dedicated service and efforts of the Managing Director, officers and officials of the Corporation.

Thank you,

Date : 27.7.2021 **CHAIRMAN**
Place : Bangalore